**ಕಳವು ಕಲಿಸಿದ್ಯಮ್ಮ ಗೋಪಿ ಕಮಲನಾಭನಿಗೆ  ॥ ಪ ॥**

ಉಳಿಸಿಕೊಂಡ್ಯ ನಿಮ್ಮ ಮನೆಯ ಪಾಲು ಬೆಣ್ಣೆಯ  ॥ ಅ.ಪ ॥

ಆರು ಏಳರ ಮುನ್ನ ಎಬ್ಬಿಸಿ ಶೃಂಗಾರ ಮಾಡಿ ।
ಗೀರು ಗಂಧವಾ ಹಚ್ಚಿ ಹಾರವ ಹಾಕಿಕೇರಿ
ಕೇರಿ ಪಾಲು ಬೆಣ್ಣೆ ಸೂರೆ ಮಾಡಿ ಬಾರೆನ್ನುತ
ವಾರಿಜನಾಭನ ಕಳುಹಿದನಮ್ಮ ವನಜನಯನಾ  ॥ ೧ ॥

ಸಣ್ಣಾ ಮಲ್ಲಿಗೆಯ ಮುಡಿಸಿ ಬಣ್ಣದ ವಲ್ಲಿಯ ತೊಡಿಸಿ ।
ಹೆಣ್ಣುಗಳ ಒಲಿಸುವಂತೆ ಹೇಳಿ ಬುದ್ದಿಯ ।
ಹುಣ್ಣಿಮೆಯ ಮೀಸಲು ಪಾಲು ಮೆಲ್ಲು ಮೆಲ್ಲು ಮೆಲ್ಲೆನ್ನುತ
ಚಿನ್ನವ ಕಳುಹಿದ್ಯಮ್ಮ ಉಣಲಿಕ್ಕೆ  ॥ ೨ ॥

ಹೊಟ್ಟೆಬಾಕನಾದನಿವನು ಬೆಟ್ಟದೊಡೆಯಗೆ ಪ್ರಿಯ ।
ಇಟ್ಟುಕೊಂಡರೇಳು ಬುವನ ಉದರದಲ್ಲಿಯೇ ।
ಎಷ್ಟು ಹೇಳಿದರು ಕೇಳ ಏನು ಮಾಡಲಮ್ಮ ನಾನು
ಕಟ್ಟು ಮಾಡಿಸಲು ಬೇಕು ಪುರಂದರ ವಿಠಲಾ  ॥ ೩ ॥

**ಬಾಲಕೃಷ್ಣನೆ ಬಾರೋ ಕಾಲಗಡಗವನಿಡುವೆ**

ಕೋಲೆ ಬುಗುರಿ ಚಂಡು ನಿನಗೆ ಇಟ್ಟಿರುವೆ
ಬಾಲಕೃಷ್ಣನೆ ಬಾರೋ ಬೇಗ ಬಾರೋ  ॥ ಪ ॥

ಅಣ್ಣಯ್ಯ ಬಲರಾಮ ಬೇಡುವನಯ್ಯ ಸಣ್ಣವ ನೀ ಬಾರೆಲೋ
ಎನ್ನ ಸಾಕು ಮಾಡದೆ ಓಡಬೇಡವೊ ಈಗ
ಬಣ್ಣಿಸಿ ತೂಗುವೆ ಗಮ್ಮನೆ ಮಲಗೋ  ॥ ೧ ॥

ಯೋಗಿಗಳ ಅರಸನೆ ನಿನಗೆ ನಾ ಜೋಗುಳ ಪಾಡುವೆನು
ನಾಗಭೂಷಣ ಬಂದು ಅಂಜಿಸುವ ನಿನ್ನನ್ನು
ಜೋಗಿ ಹಣಿಹಾಕುವೆ ಕಣ್ಣು ಮುಚ್ಚಿಕೊಳ್ಳೊ ॥ ೨ ॥
ಭಕ್ತವತ್ಸಲ ಎನಲೆ ನಿನ್ನ ನಾ ಮಗುವೆಂದು ಕರೆಯಲೆ
ಅಗಣಿತ ಮಹಿಮನೆ ಜಗವ ಮೋಹಿಪರಂಗ
ಮಗುವಲ್ಲವೋ ತಂದೆ **ಪುರಂದರವಿಠಲ** ॥ ೩ ॥

**ಅಕ್ಕ ನಂದಗೋಪನ ಅರಮನೆಯೊಳಗೊಬ್ಬ**
**ಅಕ್ರೂರ ಬಂದನಂತೆ** ॥ ಪ ॥
ಹೊಕ್ಕು ಬಳಸುವಳಲ್ಲ ಹುಸಿಯಾಡುವಳಲ್ಲ
ಇಕ್ಕೊ ಬಾಗಿಲ ಮುಂದೆ ಈಗ ರಥವ ಕಂಡೆ ॥ಅ.ಪ ॥
ಮಧುರಾಪಟ್ಟಣವಂತೆ ಮಾವಕರೆಸಿದನಂತೆ
ನದಿಯ ದಾಟಬೇಕಂತೆ ।
ಬದಲು ಮಾತಿಲ್ಲವಂತೆ ಏನೆಂಬೆ ಏಣಾಕ್ಷಿ
ಉದಯದಿ ಪಯಣವಂತೆ ಹೇ ಶಾಂತೆ ॥ ೧ ॥
ಮಲ್ಲರ ಕೂಟವಂತೆ ಮತ್ತೆ ಕಾಳಗವಂತೆ ಬಲ್ಲಿದ ಗಜಗಳಂತೆ ।
ಬಿಲ್ಲು ಹಬ್ಬಗಳಂತೆ ಬೀದಿ ಸಿಂಗಾರವಂತೆ
ಅಲ್ಲಿ ತಾಯ್‌ತಂದೆಯರ ಕಾಲ್ಗೆ ನಿಗಡವಂತೆ ॥ ೨ ॥
ಅಲ್ಲಿ ಪುಟ್ಟಿದನಂತೆ ಅರಸನಳಿಯನಂತೆ ಇಲ್ಲಿಗೆ ಬಂದನಂತೆ।
ಎಲ್ಲ ಕಪಟವಂತೆ ಎಂದೂ ಹೀಗಿಲ್ಲವಂತೆ
ನಿಲ್ಲದೆ ಯಶೋದೆಯ ಕಾಲ್ಗೆ ಬಿದ್ದನಂತೆ ॥ ೩ ॥

ಮತ್ತೆ ಪಾಂಡವರಂತೆ ಮೋಹದ ಸೋದರ ಅತ್ತೆಯ ಮಕ್ಕಳಂತೆ ।
ಸುತ್ತು ಶತ್ರುಗಳಂತೆ ಸಕಲ ಕಾರ್ಯಗಳಂತೆ
ಚಿತ್ತಜನಯ್ಯನ ಚಿತ್ತವೆರಡಾಯ್ತಂತೆ
ತಾಳಲಾರೆವೆ ನಾವು ಪುರಂದರವಿಠಲ ॥ ೪ ॥

**ಆಡಿದನೋಕುಳಿಯ ನಮ್ಮ ರಂಗ ಆಡಿದನೋಕುಳಿಯ ।**
ರಂಭಿಸಿ ಕರೆಯ ಚುಂಬಿಸಿ ಒಗೆದನು ರಂಬೇರಿಗೋಕುಳಿಯ ॥
ಕದಂಬ ಕಸ್ತೂರಿಯ ಅಳಿ ಗಂಧದ ಓಕುಳಿಯ
ಬಂದರು ಹೊರಗಿನ್ನಾರೆರಾಡು । ತಂದ ಚಂದದಿ ಓಕುಳಿಯ॥ ೧ ॥
ಪಟ್ಟೆ ಮಂಚದ ಮೇಲೆ ರಂಗ ಇಟ್ಟ ಮುತ್ತಿನಹಾರ ।
ಬಟ್ಟ ಕುಚಕೆ ಕಣ್ಣಿಟ್ಟೊಗೆದನು ಕುಟ್ಟಿದ ನೋಕುಳಿಯ ॥ ೨ ॥
ಆರು ಹತ್ತು ಸಾವಿರ ಗೋಪ ಸ್ತ್ರೀಯರೆಲ್ಲರ ಕೂಡೆ
ಮಾರನಯ್ಯ ಶ್ರೀ ಪುರಂದರ ವಿಠಲ ಹಾರಿಸಿ ಓಕುಳಿಯ ॥ ೩ ॥

---

**ಅಮ್ಮ ನಿಮ್ಮ ಮನೆಗಳಲ್ಲಿ ನಮ್ಮ ರಂಗನ ಕಾಣಿರೇನೆ ॥ ಪ ॥**
ಕಾಶಿ ಪಿತಾಂಬರ ಕೈ ಕೊಳಲು।
ಪೂಸಿದ ಶ್ರೀಗಂಧ ಮೈಯೊಳಗಮ್ಮ ।
ಲೇಸಾಗಿ ತುಳಸಿಯಮಾಲೆಯ
ಹಾಕಿದ ವಾಸುದೇವ ಬಂದ ಕಾಣಿರೇನೆ । ೧।
ಕರದಲಿ ಕಂಕಣಾ ಬೆರಳಲುಂಗುರ।
ಕೊರಳೊಳು ಹಾಕಿದ ಹುಲಿಯುಗುರಮ್ಮಾ।

ಅರಳೆಲೆ ಕನಕಕುಂಡಲ ಕಾಲಂದಿಗೆ
ಉರಗಶಯನ ಬಂದ ಕಾಣಿರೇನೆ ।೨।
ಕಾಲಲಿ ಕಿರುಗೆಜ್ಜೆ ನೀಲದ ಬಾವುಲಿ ।
ನೀಲವರ್ಣನು ನಾಟ್ಯವಾಡುತಲಿ ಮೇಲಾಗಿ
ಬಾಯಲಿ ಜಗವನೆ ತೋರಿದ
ಮೂರು ಲೋಕದೊಡೆಯನ ಕಾಣಿರೇನೆ ।೩।
ಕುಂಕುಮ ಕಸ್ತೂರಿ ಕುಡಿಕುಡಿ ನಾಮವು ।
ಶಂಖ ಚಕ್ರಂಗಳ ಧರಿಸಿದನಮ್ಮ ।
ಬಿಂಕದಿಂದಲಿ ಕೊಳಲೂದುತ್ತ ಪಾಡುತ್ತಾ
ಪಂಕಜಾಕ್ಷನು ಬಂದಕಾಣಿರೇನೆ ।೪।
ತೆತ್ತಿಸಕೋಟಿ ದೇವರ್ಗಳ ಒಳಗೂಡಿ
ಹತ್ತಾವತಾರವ ನೆತ್ತಿದನೆ ಭಕ್ತವತ್ಸಲ
ನಮ್ಮ ಪುರಂದರವಿಠಲ
ನಿತ್ಯೋತ್ಸವ ಬಂದ ಕಾಣಿರೇನೆ ।೫।

---

**ಓಡಿ ಓಡಿ ಬಾ । ಅಂಕದೊಳಾಡುವ ಕೂಸೆ ಬಾ ॥ ಪ ॥**
ನೋಡುವೆ ನಿನ್ನ ರಾಮನ ಮುಖದಿ ಕೂಡಿ ಕರುಣಿಯೆ ಬಾ॥ಅ.ಪ॥
ಚೆಂಡು ಕೊಡುವೆನು ಬಾ । ಗೋಲಿ ಗುಂಡು ಕೊಡುವೆನು ಬಾ ।
ದುಂಡುಕರದೊಳು ಗುಂಡು ಬಿಂದುಲಿ ಉಂಗುರ ನೀಡುವೆ ಬಾ।೧।
ಬೆಣ್ಣೆ ಕೊಡುವೆನು ಬಾ । ಬಾಳೆಹಣ್ಣು ಕೊಡುವೆನು ಬಾ ।
ಸಣ್ಣಸಣ್ಣ ಹೆಜ್ಜೆಯನಿಕ್ಕುತ ಮನ್ಮಥ ಪಿತನೆ ಬಾ ।೨।

ನಾರಿ ವತ್ಸಲ ಬಾ । ಮುತ್ತಿನಹಾರ ಹಾಕುವೆ ಬಾ ।
ಪಾರಿಜಾತ ಮುಡಿಸಿದ ರುಕ್ಮಿಣಿ ಧೀರ ಕೃಷ್ಣನೆ ಬಾ ।೩।
ಮುರಳಿಧರನೇ ಬಾ । ಮುಂಗುರುಗಳ ಶೋಭಿತ ಬಾ ।
ಪರಿ ಪರಿ ವಸ್ತ್ರವನಿಟ್ಟು ನೋಡುವೆ ಮರಳಿ ಮರಳಿ ಬಾ ।೪।
ನಂದನ ಕಂದನೆ ಬಾ । ಮನಕಾನಂದ ಪಡಿಸುತಾ ಬಾ ।
ನಿಂದಿರಲಾರೆ ನಿನ್ನನು ನೋಡನೆ ಇಂದಿರೇಶನೆ ಬಾ ।೫।

**ಕಾದನ ವತ್ಸವಹರಿ ಕಾದನ ॥ ಪ ॥**
ವೇದವೇದ್ಯ ಸಾಧುವಂದಿತ ರಾಧಿಕ ರಮಣ ಕೃಷ್ಣ ॥ ಅ.ಪ ॥
ಎಳೆಗರಿಕೆ ಇರುವ ಸ್ಥಳದಿ ಕರೆದು ವತ್ಸುಗಳನೆ ನಿಲಿಸಿ
ಕೊಳಲು ತನ್ನ ಕೈಲಿ ಪಿಡಿದು ಮುರಳಿ ಗಾನ ಮಾಡುತ ।
ತನ್ನ ಸೆರಗು ತೆಗೆದು ಕೃಷ್ಣ ಕರುಗಳನ್ನೇ ಬೆನ್ನೊರೆಸಿ
ತಿನ್ನು ತಿನ್ನು ಹುಲ್ಲು ಎನುತ ತನ್ನ ಕರದಿಂದೊತ್ತುತಾ ॥ ೧ ॥
ಉಡುಗಳಂತೆ ಕರುಗಳಾ ನಡುವೆ ಚಂದ ಧರೆಯೊಳು
ಪೊಡವಿಯೊಳಗೆ ಬೆಳೆದನು ಆ ಮೃಡನು ಕೊಂಡಾಡಲು ।
ಒಂದು ತಿಂಗಳ ಕರುಗಳು ಇಂದಿರೇಶನು ಮೇಯಿಸಲು
ಒಂದು ವರುಷ ಕರುಗಳಂತೆ ಚಂದದಿಂದ ಬೆಳೆದವು ॥ ೨ ॥
ಕನಕ ರಜತ ಸರಪಳಿ ದನಕರುಗಳ ಕೊರಳಲಿ
ಮಿನುಗುತಿಪ್ಪ ಅರಳಲೆ ಅನೇಕ ನಾದದಿಂದಲಿ ।
ಅಜಗಳಂತಿದ್ದ ಕರುಗಳು ಗಜಗಳಂತೆ ಆದವು
ತ್ರಿಜಗದೊಡೆಯ **ವಿಜಯವಿಠಲ** ವ್ರಜಕೆ ದೊರೆ ಆಳುವ ॥ ೩ ॥